ಇ] ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯದಲ್ಲಿ ಉತ್ತರಿಸಿ.

೧. ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ಮಾಡಿದ ದ್ರೋಹವೇನು?

ಉತ್ತರ: ದೊರೆಯ ಕಿರಿಮಗಳು ತನ್ನ ಅತ್ತಿಗೆಯನ್ನು ಹೂವಿನ ಗಿಡ ಮಾಡಬೇಕೆಂದು ಆಲೋಚಿಸಿದಳು. ತಾಯಿ ಮತ್ತು ಅಣ್ಣನಿಗೆ ಒಪ್ಪಿಸಿ ಅತ್ತಿಗೆಯನ್ನೂ ತನ್ನ ಗೆಳತಿಯರನ್ನೂ ಕರೆದುಕೊಂಡು ಸುರಹೊನ್ನೆ ತೋಟಕ್ಕೆ ಕರೆದುಕೊಂಡು ಹೋದಳು. ಉಯ್ಯಾಲೆ ಹಾಡುತ್ತಾ ಇದ್ದಾಗ ಇದ್ದಕಿದ್ದಂತೆ ದೊರೆ ಮಗಳು ಅತ್ತಿಗೆಗೆ ನೀನು ಹೂವಿನಗಿಡ ಆಗ್ತೀಯಲ್ಲ ಆಗು ಎಂದಳು. ಅದಕ್ಕೆ ಅವಳು ಆಗುವುದಿಲ್ಲವೆಂದು ಹೇಳಿದಾಗ "ಆಹಾ... ಅಲ ್ಲ ಅತ್ತಿಗೆ ನಮ್ಮುಂದೆ ಆಗದೆ, ಇನ್ನಾರ ಮುಂದೆ ಹೂವಿನಗಿಡ ಆಗಾಕೆ ಹೋಗ್ತೀಯಾ" ಎಂದು ನಿಷ್ಠುರವಾಗಿ ಮಾತಾಡಿದಳು. ವ್ಯಥೆಪಟ್ಟು ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿ ಕೊಟ್ಟು ಅವುಗಳನ್ನು ಸುರಿಯುವ, ಹೂವನ್ನು ಕೀಳುವ ವಿಧಾನವನ್ನೆಲ್ಲ ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ಹುಡುಗಿಯರು ಸರಿಯಾಗಿ ಆಲಿಸದೆ ನಿರ್ಲಕ್ಷದಿಂದ ತಂಬಿಗೆ ನೀರು ಅಡ್ಡಾದಿಡ್ಡಿಯಾಗಿ ಸುರಿದರು ಆಕೆ ಅರ್ದಂಬರ್ಧ ಗಿಡ ಆದಳು. ಅಷ್ಟು ಹೊತ್ತಿಗೆ ಸಾಯಂಕಾಲವಾಗಿತ್ತು; ಮಳೆ ಪ್ರಾರಂಭವಾಯಿತು. ಆಗ ಅವರು ತೊಟ್ಟು, ಎಲೆ ಸುಳಿ ಕಿತ್ತು. ರೆಂಬೆನೆಲ್ಲ ಮುರಿದು ಬಿಟ್ಟರು. ಈ ಮಳೆಗೆ ಹೆದರಿ ಮನೆಗೆ ಹೋಗೋ ಆತುರದಲ್ಲಿ ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಸುರಿದು ಹೊರಟು ಹೋದರು. ಆದ್ದರಿಂದ ಆಕೆ ಮನುಷ್ಯಳಾದಾಗ ಕೈಯಿಲ್ಲದ ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು, ಮೈಯೆಲ್ಲ ಗಾಯವಾಗಿತ್ತು. ಆ ಮಳೆಯ ನೀರಿನಲ್ಲಿ ತೇಲಿಕೊಂಡು ಬಹುದೂರ ಹೋಗಿ ಅಲ್ಲೊಂದು ಮೋರಿಯಲ್ಲಿ ಬಿದ್ದಳು. ಹೀಗೆ ದೊರೆಯ ಕಿರಿ ಮಗಳು ತನ್ನ ಅತ್ತಿಗೆಗೆ ದ್ರೋಹ ಮಾಡಿದಳು. ೨. ದೊರೆಯ ಮಗ ತನ್ನ ಹೆಂಡತಿಯನ್ನು ಹೇಗೆ ಪುನಃ ಪಡೆದನು?

ಉತ್ತರ: ನಡೆದ ನಿಜಸಂಗತಿ ಅವನಿಗೆ ತಿಳಿಯದೇ ತನ್ನ ಹೆಂಡತಿ ತಪ್ಪಿಸಿಕೊಂಡಿದ್ದಾಳೆಂದು ತಿಳಿದು ಬೇಸರಗೊಂಡು; ಸನ್ಯಾಸಿಯಂತೆ ಬಟ್ಟೆ ತೊಟ್ಟುಕೊಂಡು ದೇಶಾಂತರ ಹೊರಟನು. ದೇಶದೇಶವೆಲ್ಲ ತಿರುಗಿ ತನ್ನ ಅಕ್ಕನ ಪಟ್ಟಣಕ್ಕೆ ಬಂದನು. ಪಟ್ಟಣದ ಬಾಗಿಲ ಬಳಿ ಕುಳಿತಿದ್ದ ಅವನಿಗೆ ಗಡ್ಡಮೀಸೆ ಬೆಳೆದಿತ್ತು. ನೀರಿಗೆ ಹೋಗಿ ಬರುತ್ತಿದ್ದ ದಾದಿಯರು ಅವನನ್ನು ನೋಡಿ ಅರಮನೆಗೆ ಬಂದು "ಅಮ್ಮಾವ್ರೇ, ಯಾರೋ ನಿಮ್ಮ ತಮ್ಮ ಕುಳಿತಂಗ ಕಾಣುತ್ತೆ" ಅಂತ ಗೋಗರೆದರು. ದುರದಿಂದಲೇ ದುರಬೀನು ಹಾಕಿ ನೋಡಿ, ಕರೆಸಿ, ರಾಣಿ ನನ್ನ ತಮ್ಮನೇ ಇರಬೇಕೆಂದು ಕೊಂಡಳು. ಅವನಿಗೆ ಚೆನ್ನಾಗಿ ಸ್ನಾನ ಮಾಡಿಸಿದ ನಂತರ ಅವನು ನಿಜವಾಗಿ ತನ್ನ ತಮ್ಮನೆಂದು ತಿಳಿದುಕೊಂಡಳು. ನಂತರ ಅವನಿಗೆ ಚೆನ್ನಾಗಿ ಉಪಚಾರಮಾಡಿದಳು. ಆದರೆ ಆತ ಮಾತನಾಡಲೇ ಇಲ್ಲ. ನಾನೆಷ್ಟು ಉಪಚಾರ ಮಾಡಿದರೂ ಏಕೆ ಮಾತನಾಡುತ್ತಿಲ್ಲ ಎಂದು ಯೋಚಿಸಿ, ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳುಸಿದಳು ಆದರೂ ಅವನು ಮಾತಾಡಲಿಲ್ಲ. ನಂತರ ದಾದಿಯರೆಲ್ಲಾ ಸೇರಿ ಅರಮನೆಯಲ್ಲಿದ್ದ ಅವನ ಹೆಂಡತಿಗೆ ಶೃಂಗಾರಮಾಡಿ, ರಾಣಿಯಿಂದ ಅಪ್ಪಣೆ ಪಡೆದು ಅವನ ಮಂಚದ ಮೇಲೆ ಕೂರಿಸಿದರು. ಆ ರಾತ್ರಿ ಅವಳು ಮೋಟುಗೈಯಲ್ಲಿ ಅವನ ಕಾಲನ್ನು

ಒತ್ತುತ್ತ ಅಳುತ್ತಿದ್ದಾಗ ಅವನು ಎದ್ದು ನೋಡಿ, ಇವಳೇ ನನ್ನ ಹೆಂಡತಿಯೆಂದು ತಿಳಿದು; ಅವಳಿಗೆ ತನ್ನ ತಂಗಿಯಿಂದಾದ ದ್ರೋಹವನ್ನು ಕೇಳಿ ತಿಳಿದುಕೊಂಡು; ಅಕ್ಕನಿಂದ ಉಡುಗೊರೆ ಪಡೆದುಕೊಂಡು ಆನಂದದಿಂದ ಊರಿಗೆ ಕರೆದುಕೊಂಡು ಬಂದನು.

ಈ] ಸಂದರ್ಭಸಹಿತ ಸ್ವಾರಸ್ಯವನ್ನು ವಿವರಿಸಿ.

೧. ''ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು''

ಉತ್ತರ: ಆಯ್ಕೆ:– ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ. ಸ

ಂದರ್ಭ:– ಕಿರಿಯ ತಂಗಿ ಹೂವಿನ ಗಿಡವಾಗಿ ಆ ಗಿಡದ ಹೂವನ್ನು ಹಿರಿಯ ಹುಡುಗಿ ಬಿಡಿಸಿಕೊಂಡು ಅರಮನೆಯಲ್ಲಿ ದೊರೆಯ ಹೆಂಡತಿಗೆ ಮಾರಿದಾಗ ರಾಣಿಯು ಒಂದು ಮೊಗೆ ಹಣ ಕೊಟ್ಟಳು. ಅಕ್ಕ ಮೊಗೆ ಹಣವನ್ನು ತಂದು ತಂಗಿಗೆ ತೋರಿದಳು. ಆ ಸಂದರ್ಭದಲ್ಲಿ ತಂಗಿಯು ''ಅಕ್ಕಯ್ಯ ಅಮ್ಮನಿಗೆ ಹೇಳಬೇಡ ಮುಚ್ಚಿಡು'' ಎನ್ನುತ್ತಾಳೆ.

ಸ್ವಾರಸ್ಯ:– ಇಲ್ಲಿ ವಯಸ್ಸಾದ ತಮ್ಮ ತಾಯಿಗೆ ಸಹಾಯಮಾಡಬೇಕೆಂಬ ಹೆಣ್ಣುಮಕ್ಕಳ ಮನೋಭಾವ ಮತ್ತು ಸಂಪಾದನೆ ಮಾಡಿದ ಹಣವನ್ನು ತಾಯಿಗೆ ತೋರಿಸಿದರೆ ಎಲ್ಲಿಂದ ಬಂತು ಎಂದು ಬಯ್ಯುವಳೋ ಎಂಬ ಅಂಜಿಕೆ ಇಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

೨. ''ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?''

ಉತ್ತರ: ಆಯ್ಕೆ:– ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ರಾಜನ ಮಗನು ಹೂವಿನ ಗಿಡವಾಗುತ್ತಿದ್ದ ಕಿರಿಯ ಹುಡುಗಿಯನ್ನು ಮದುವೆಯಾದ ಮೊದಲ ದಿನ ಒಟ್ಟಿಗೆ ಇದ್ದಾಗ ಅವರೇ ಮಾತನಾಡಲಿ ಅಂತ ಅವಳು. ಅವಳೇ ಮಾತಾಡಲಿ ಅಂತ ಅವನು. ಹೀಗೆ ಇಬ್ಬರೂ ಮೌನವಾಗಿ ಸುಮ್ಮನಿದ್ದರು. ಆ ಸಂದರ್ಭದಲ್ಲಿ ಆ ಹುಡುಗಿ ''ಈ ಸಂಪತ್ತಿಗೇಕೆ ನನ್ನ ಮದುವೆ ಆದಿರಿ?'' ಎಂದು ರಾಜಕುಮಾರನನ್ನು ಕೇಳುತ್ತಾಳೆ.

ಸ್ವಾರಸ್ಯ:– ಇಲ್ಲಿ ಹೊಸದಾಗಿ ಮದುವೆಯಾದ ಗಂಡ–ಹೆಂಡತಿಯ ನಡುವಿನ ಸಂಕೋಚ ಹಾಗೂ ಅವಳನ್ನು ಹೂವಿನ ಗಿಡವಾಗಿಸಲು ರಾಜಕುಮಾರ ಮೌನವಾಗಿದ್ದ ರೀತಿ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

೩. "ಯಾರಾದರೂ ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ"

ಉತ್ತರ: ಆಯ್ಕೆ:– ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ರಾಜನ ಕಿರಿ ಮರಗಳ ದ್ರೋಹದಿಂದ ಅರ್ದಂಬರ್ಧ ಮನುಷ್ಯಳನ್ನಾಗಿದ್ದ ಹೂವಾಗುವ ಹುಡುಗಿಯು ಮಳೆಯಲ್ಲಿ ತೇಲಿಕೊಂಡು ಹೋಗಿ ಮೋರಿಯಲ್ಲಿ ಬಿದ್ದಿದ್ದಾಗ ಗಾಡಿಯಲ್ಲಿ ಹೋಗುತಿ ್ತದ್ದವನೊಬ್ಬ ನೋಡಿ ಬಟ್ಟೆ ಇಲ್ಲದೆ ಬಿದ್ದಿದ್ದ ಅವಳಿಗೆ ತನ್ನ ತಲೆಯಲ್ಲಿದ್ದ ವಸ್ತ್ರ ಹಾಕಿ; ಗಾಡಿಯಲ್ಲಿ ಕೂರಿಸಿಕೊಂಡು ಹೋಗಿ ಮುಂದೆ ಒಂದು ಊರಿನ ಮಂಟಪದಲ್ಲಿಟ್ಟು ಹೋಗುವ ಸಂದರ್ಭದಲ್ಲಿ "ಯಾರಾದರು ಅನ್ನ ನೀರು ಕೊಟ್ಟರೆ ಜೀವ ಉಳಿಸಿಕೋ" ಅಂತ ಹೇಳಿ ಹೋಗುತ್ತಾನೆ.

ಸ್ವಾರಸ್ಯ:– ಇಲ್ಲಿ ಗಾಡಿಯವನು ಆ ಹುಡುಗಿಗೆ ತೋರಿದ ಮಾನವೀಯತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.

೪. "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ"

ಉತ್ತರ: ಆಯ್ಕೆ:– ಎ. ಕೆ. ರಾಮಾನುಜನ್ ಅವರು ಸಂಪಾದಿಸಿರುವ 'ಸಾಲು ಸಂಪಿಗೆ ನೆರಳು' ಕೃತಿಯಿಂದ ಆರಿಸಿಕೊಳ್ಳಲಾಗಿರುವ 'ಹೂವಾದ ಹುಡುಗಿ' ಎಂಬ ಜನಪದ ಕಥೆಯಿಂದ ತೆಗೆದುಕೊಳ್ಳಲಾಗಿದೆ.

ಸಂದರ್ಭ:– ಗಾಡಿಯಲ್ಲಿ ಹೋಗುತ್ತಿದ್ದವನೊಬ್ಬ ಗಾಡಿಯಲ್ಲಿ ಕೂರಿಸಿಕೊಂಡು ಹೋಗಿ ಒಂದು ಊರಿನ ಮಂಟಪದಲ್ಲಿಟ್ಟು ಹೋದನಂತರ ಆ ಮಾರ್ಗದಲ್ಲಿ ನೀರು ತೆಗೆದುಕೊಂಡು ಹೋಗುತ್ತಿದ್ದ ಅರಮನೆಯ ದಾದಿಯರು ಅವಳನ್ನು ಕಂಡು ಅವಳು ರಾಣಿಯ ತಮ್ಮನ ಹೆಂಡತಿ ಇರಬಹುದೆಂದು ಊಹಿಸಿ "ಅವಳನ್ನು ನೋಡಿದರೆ ನಿಮ್ಮ ತಮ್ಮನ ಹೆಂಡತಿಯಂತೆ ಕಾಣ್ತಾಳೆ" ಎಂದು ಈ ಸಂದರ್ಭದಲ್ಲಿ ತಮ್ಮ ರಾಣಿಗೆ ಹೇಳುತ್ತಾರೆ.

ಸ್ವಾರಸ್ಯ:– ಇಲ್ಲಿ ಅರಮನೆಯ ದಾದಿಯರಿಂದಾಗಿ ಹೂವಾಗುವ ಹುಡುಗಿ ಅರಮನೆ ಸೇರಿದ್ದು ಮತ್ತು ದಾದಿಯರು ತೋರಿದ ಮಾನವೀಯತೆ ಸ್ವಾರಸ್ಯಪೂರ್ಣವಾಗಿ ಮೂಡಿಬಂದಿದೆ.